



ಮನೆಗೆ ದ್ರಾಕ್ಷಿ ಚಪ್ಪರ



ಖರ್ಜೂರದ ವನ



ಒಣಹಣ್ಣಿನ ಅಂಗಡಿ



ಅರೇಬಿಯಾದ ಕಪ್ಪು ಅಂಜೂರ

ಬೆಟ್ಟದ ಸುತ್ತ, ಖರ್ಜೂರದ ತೋಟಗಳು ದಿಗಂತದವರೆಗೂ ಸಮುದ್ರೋಪಾದಿಯಲ್ಲಿ ಹಬ್ಬಿದ್ದವು. ಅಝುರ್‌ಬೈಜಾನಿನ ಕಾಕಸಸ್ ಪರ್ವತಗಳ ಕೆಳಭಾಗದಲ್ಲಿ, ಗಬಾಲಾ ನಗರದ ಆಸುಪಾಸು, ಹಾದಿಯುದ್ದಕ್ಕೂ ದ್ರಾಕ್ಷಿ, ಸೇಬು, ಬದಾಮಿ, ಅಕ್ರೋಟದ ತೋಟಗಳಿದ್ದವು. ಇಷ್ಟು ಸಾಲದೆಂಬಂತೆ ಜನ ಮನೆಯ ಮುಂದಿನ ಚಪ್ಪರದಲ್ಲಿ, ಗೋಡೆಯ ಮೇಲೆ ದ್ರಾಕ್ಷಿಬಳ್ಳಿ ಹಬ್ಬಿಸಿದ್ದರು. ಮನೆಗಳ ಕೈತೋಟದಲ್ಲಿ ಹಣ್ಣಿನ ಗಿಡಗಳಂತೂ ಕಡ್ಡಾಯ. ಇರಾನಿನಲ್ಲಿ ಕೈದೋಟಗಳ ಸುತ್ತ ಮಣ್ಣಿನ ಗೋಡೆಯನ್ನು ಎಬ್ಬಿಸಲಾಗಿತ್ತು. ಹೊಲಗಳಲ್ಲಿ ಮಹಿಳೆಯರು ಗುದ್ದಲಿ ಹಿಡಿದು ಅಗತೆ ಮಾಡುವ, ಕುರಿ–ಒಂಟೆ ಕಾಯುವ, ನೀರುಣಿಸುವ, ಹಣ್ಣು ಹೂವು ಬಿಡಿಸುವ ದೃಶ್ಯಗಳು ಗೋಚರಿಸುತ್ತಿದ್ದವು.

ಮರುಭೂಮಿಯ ಕಲ್ಪವೃಕ್ಷ ಖರ್ಜೂರವಾದರೆ, ಕಲ್ಪಲತೆ ದ್ರಾಕ್ಷಿ. ಪ್ರಕೃತಿ ತನ್ನ ಸೆರಗಿನಲ್ಲಿ ಬದುಕುವ ಜನರಿಗೆ ಪ್ರಾಣಿಪಕ್ಷಿಗಳಿಗೆ ಫಲಪುಷ್ಪಗಳನ್ನು, ಕಾಯಿಪಲ್ಲೆಯನ್ನು ಉದಾರವಾಗಿ ದಯಪಾಲಿಸಿತ್ತು. ಹಣ್ಣಿನ ತೋಟಗಳಿರುವಲ್ಲಿ ಹಕ್ಕಿಗಳ ಕಲರವವಿತ್ತು. ಗುಬ್ಬಚ್ಚಿಗಳು ಖರ್ಜೂರದ ಮರದಲ್ಲಿ ಗಲಭೆ ಎಬ್ಬಿಸುತ್ತಿದ್ದವು. ರಸ್ತೆಬದಿಯ ಖರ್ಜೂರದ ಗಿಡಗಳಿಂದ ಬಿದ್ದ ಮತ್ತು ಹಕ್ಕಿಗಳು ಸೂರೆಹೊಡೆದ ಹಣ್ಣು, ವಾಹನಗಳ ಚಕ್ರಕ್ಕೆ ಸಿಕ್ಕಿ ಹುಣಸೆಹಣ್ಣು ಮೆತ್ತಿದಂತೆ ರಸ್ತೆಯನ್ನು ಅಂಟಾಗಿಸಿತ್ತು.

ಮರುಭೂಮಿಯ ನೆಲಗುಣವೆಂದು ತೋರುತ್ತದೆ– ಅಲ್ಲಿನ ಹಣ್ಣುಗಳಲ್ಲಿ ವಿಶಿಷ್ಟ ಸ್ವಾದವಿತ್ತು. ದ್ರಾಕ್ಷಿಗಳಲ್ಲಿ ಆರು ತಳಿಗಳು; ಸೇಬು ಹತ್ತಕ್ಕಿಂತ ಹೆಚ್ಚು ಜಾತಿಯವು. ಟರ್ಕಿಸೇಬು ತುಸು ದುಬಾರಿ. ದಾಳಿಂಬೆ, ತೆಂಗಿನಕಾಯಿ ಗಾತ್ರ. ಕಲ್ಲಂಗಡಿ ಒಬ್ಬ ಆಳು ಕಷ್ಟಪಟ್ಟು ಎತ್ತಬೇಕು. ಅಗ್ಗದ ಹಣ್ಣೆಂದರೆ ಹಳದಿ ಫುಟ್‌ಬಾಲಿನಂತಹ ಸಿಹಿಸೌತೆ ಮತ್ತು ಕರಬೂಜ. ಕಪ್ಪು ಅಂಜೂರ ನಮ್ಮ ಹಸಿರು ಅಂಜೂರಕ್ಕಿಂತ ರುಚಿಕರವಾಗಿತ್ತು. ಅಝುರ್‌ಬೈಜಾನಿನ ಕರಬೂಜ ಮತ್ತು ಕಲ್ಲಂಗಡಿಗಳು ಸಕ್ಕರೆ ಪಾಕದಲ್ಲಿ ಅದ್ದಿದಂತಿದ್ದವು. ಇಲ್ಲಿನ ರಾಷ್ಟ್ರೀಯ ಫಲ ದಾಳಿಂಬೆ. ದಾಳಿಂಬೆಯ ನಾನಾ ವಿನ್ಯಾಸದ ಪ್ರತಿಕೃತಿಗಳು ಅಂಗಡಿಗಳಲ್ಲಿ ಮಾರಾಟಕ್ಕಿದ್ದವು. ಇಲ್ಲಿನ ಜನ ಕೂಡ ಹಣ್ಣುಬಾಕರು. ಊಟದಲ್ಲಿ ಹಸಿಹಣ್ಣು, ಸೊಪ್ಪು, ತರಕಾರಿಗಳನ್ನು ಯಥೇಚ್ಛ ಸ್ವೀಕರಿಸುವರು. ಬಿರಿಯಾನಿಯಲ್ಲಿ ಪಲಾವಿನಲ್ಲಿ ಪಾಯಸದಲ್ಲಿ, ಚಹಾದಲ್ಲಿ, ರೊಟ್ಟಿಯಲ್ಲಿ ಒಣಹಣ್ಣು ಸೇರಿಸುವರು. ಮನೆಗೆ ಬಂದ ಅತಿಥಿಗಳಿಗೆ ತಟ್ಟೆಯ ತುಂಬ ಒಣಹಣ್ಣನ್ನು ಮುಂದಿಟ್ಟು ಉಪಚರಿಸುವರು. ಇದರ ಆಹಾರ ವ್ಯವಸ್ಥೆಯ ಪರಿಣಾಮವೋ ಏನೋ, ಅಲ್ಲಿ ಬೊಜ್ಜು ದೇಹದವರು ಬಹಳ ಕಡಿಮೆ.

ನಾವು ಉಪಾಹಾರಕ್ಕೆ ಊಟಕ್ಕೆ ಬೇಯಿಸಿದ ಪದಾರ್ಥ ಕಡಿಮೆ ಮಾಡಿ, ತಟ್ಟೆ ತುಂಬ ಹಣ್ಣು ತರಕಾರಿ ಬಡಿಸಿಕೊಂಡು ತಿನ್ನುತ್ತಿದ್ದೆವು. ಅಝುರ್‌ಬೈಜಾನ್, ಜೋರ್ಡಾನ್, ಈಜಿಪ್ಟ್, ಪ್ಯಾಲಸ್ತೀನ್‌ಗಳಲ್ಲಿ ಪಾಕಗೊಳಿಸಿದ ವಿವಿಧ ಆಲಿವ್ ಹಣ್ಣುಗಳು ಉಪ್ಪಿನಕಾಯಂತೆ ದೊರೆಯುತ್ತವೆ. ಇರಾಕ್, ಇರಾನಿನ ಹಣ್ಣಿನ ಅಂಗಡಿಯವರಾದರೂ ಎಷ್ಟು ಉದಾರ! ರುಚಿ ನೋಡಲು ಹಣ್ಣುಗಳನ್ನು ತಾವಾಗಿ ಎತ್ತಿ ಕೊಡುತ್ತಾರೆ. ಕರ್ಬಲಾದಲ್ಲಿ ಯಾತ್ರಿಕರಿಗೆ ಉಚಿತವಾಗಿ ತಿನ್ನಲು ಅಂಗಡಿಯ ಮುಂದೆ ಖರ್ಜೂರದ ಕ್ರೇಟನ್ನೇ ಇಟ್ಟಿದ್ದರು. ಪ್ಯಾಲಸ್ತೀನ್‌ನಲ್ಲಿ, ಜಗತ್ತಿನ ಪ್ರಾಚೀನ ನಗರವಾದ ಜೆರಿಕೊದಲ್ಲಿ ಬಸ್ಸಿನೊಳಗೆ ಬರುವ ಹುಡುಗರು ರಸಭರಿತ ಖರ್ಜೂರಗಳನ್ನು ತಿನ್ನಲು ಕೊಟ್ಟು, 'ನಮ್ಮ ಅಂಗಡಿಗೆ ಬನ್ನಿ' ಎಂದು ಆಹ್ವಾನಿಸುತ್ತಿದ್ದರು. ಬಲ್ಲಾದ್ ಪಟ್ಟಣದಲ್ಲಿ ಒಬ್ಬ ರೈತ ಸಂತೆಯಲ್ಲಿ ಒಟ್ಟಿಕೊಂಡಿದ್ದ ಒಣದ್ರಾಕ್ಷಿಯ ರಾಶಿಯಲ್ಲಿ ಒಂದನ್ನು ಎತ್ತಿಕೊಂಡೆ. ಆತ 'ಹಾಗಲ್ಲ' ಎಂದು ಹಿಡಿಯಷ್ಟು ಬಾಚಿ ನನ್ನ ಬೊಗಸೆ ತುಂಬಿದನು. ರಾಶಿಬಿದ್ದಿದ್ದ ಅಕ್ರೋಟದ ಪಟ ತೆಗೆಯಲು ಯತ್ನಿಸುತ್ತಿದ್ದೆ. ಅದನ್ನು ಮಾರುತ್ತಿದ್ದ ತರುಣನು, ಎರಡು ಅಕ್ರೋಟುಗಳನ್ನು ಕಟಿಂಗ್ ಪ್ಲೇಯರಿನಲ್ಲಿ ಪಟ್ಟನೆ ಒಡೆದು, ಒಳಗಿದ್ದ ಮೆದುಳಿನಾಕಾರದ ತಿರುಳನ್ನು ತೆಗೆದು ತಿನ್ನಗೊಟ್ಟನು. ಬಲ್ಲಾದ್ ಬಸ್ರಾಗಳಲ್ಲಿ ಖರ್ಜೂರದ ಮಂಡಿಗಳಲ್ಲಿ ಸ್ಯಾಂಪಲ್ಲಿಗೆ ತಿನ್ನುತ್ತ ದಿನವಿಡೀ ತಿರುಗಬಹುದು. ನಾವು ಅಲ್ಲಿನ